**ಸಾಕ್ಷಿಯನ್ನು ದಿನಾಂಕಃ24-07-2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀಃ ಎಸ್.ಎಸ್.ಡಿ. ಪ್ರತಿವಾದಿ 1 ರಿಂದ 3 , 7 ರಿಂದ 9 ಮತ್ತು 12 ಪರ ವಕೀಲರಿಂದಃ**

ಎಲ್ಲಾ ಪ್ರತಿವಾದಿಗಳು ಎರಡನೇ ಪ್ರತಿವಾದಿಯೊಂದಿಗೆ ಅನ್ಯೋನ್ಯವಾಗಿದ್ದಾರೆ. ನಮ್ಮ ತಂದೆ ವರಿಗೆನಾವು 5 ಜನ ಮಕ್ಕಳಿರುತ್ತೇವೆ. ನನ್ನ ಹಿರಿಯಅಣ್ಣ ಎಡ್ವರ್ಡ್ 1973 ನೇ ಸಾಲಿನಲ್ಲಿ ವಿದೇಶಕ್ಕೆ ಹೋಗಿರುತ್ತಾರೆ. ಅವರ ಕುಟುಂಬಸ್ಥರೆಲ್ಲರೂ ವಿದೇಶದಲ್ಲಿ ವಾಸ ಮಾಡಿಕೊಂಡಿದ್ದುಅವರು ಅಲ್ಲಿಯೇ ಮರಣ ಹೊಂದಿರುತ್ತಾರೆ.

2. ಒಂದನೇ ಪ್ರತಿವಾದಿಯು 1979 ನೇ ಸಾಲಿನಲ್ಲಿ ವಿದೇಶಕ್ಕೆ ಹೋಗಿ ಸುಮಾರು 19 ವರ್ಷಗಳ ಕಾಲ ಅಲ್ಲಿಯೇ ನೆಲೆಸಿದ್ದರು. ನಮ್ಮ ತಂದೆಯವರ ನಾಲ್ಕನೇ ಮಗನಾದ ಬ್ಯಾಪ್ಟಿಸ್ಟ್ ಕಡೊಜಾ ರವರಿಗೆ ಅವರ ಜೀವಿತಾವಧಿಯಲ್ಲಿ ನಿಮ್ಮ ತಾಯಿಯವರು ಕೃಷಿ ಭೂಮಿಯನ್ನು ನೀಡಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಸ್ವಂತ ಹಣದಿಂದ ನಾನು ಎರಡೂ ವರೆ ಎಕರೆ ಜಮೀನನ್ನು 1985-86 ನೇ ಸಾಲಿನಲ್ಲಿ ನೀಡಿರುತ್ತೇನೆ. ಸದರಿ ಆಸ್ತಿಯಿನ್ನು ನಾನು ಬ್ಯಾಪ್ಟಿಸ್ಟ್ ಕಡೊಜಾ ರವರ ಹೆಸರಿಗೆ ಖರೀದಿಸುವಾಗ ಸದರಿ ಆಸ್ತಿಯು ನನ್ನ ಹಿರಿಯ ಸಹೋದರನ ಹೆಸರಿನಲ್ಲಿ ಇತ್ತು. ಸದರಿ ಆಸ್ತಿಯನ್ನು ನಾನು ಖರೀದಿಸಿ ಕೊಡುವ ವರೆಗೂ ಬ್ಯಾಪ್ಟಿಸ್ಟ್ ಕಡೊಜಾ ರವರು ನಮ್ಮ ತಾಯಿ ಮತ್ತು ಎರಡನೇ ಪ್ರತಿವಾದಿಯೊಂದಿಗೆ ದಾವಾ ಆಸ್ತಿಯಲ್ಲಿಯೇ ವಾಸ ಮಾಡಿಕೊಂಡಿದ್ದರು. ನಾನು 1979 ನೇ ಸಾಲಿನಲ್ಲಿ ವಿದೇಶಕ್ಕೆ ಹೋಗಿರುತ್ತೇನೆ. ಎರಡನೇ ಪ್ರತಿವಾದಿಯು 5 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರಬಹುದು. ದಾವಾ ಆಸ್ತಿಗಳು ಹಾಲಿ ಎರಡನೇ ಪ್ರತಿವಾದಿಯ ಸ್ವಾಧೀನದಲ್ಲಿಯೇ ಇರುತ್ತದೆ. ನಮ್ಮ ತಾಯಿಯವರ ಮರಣಾನಂತರ ದಾವಾ ಆಸ್ತಿಯು ಎರಡನೇ ಪ್ರತಿವಾದಿಯ ಸ್ವಾಧೀನದಲ್ಲಿಯೇ ಇರುತ್ತದೆ. ನಮ್ಮ ತಾಯಿಯವರು 2009 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ನೀವು ಸಿಂಡಿಕೇಟ್ ಬ್ಯಾಂಕ್ ಮುಂಡ್ಕೂರು ಶಾಖೆಯಿಂದ ಪಡೆದಂತಹ ಸಾಲಕ್ಕೆ ನಿಮ್ಮ ತಾಯಿಯವರೇ ಜಾಮೀನುದಾರರಾಗಿರುತ್ತಾರೆ ಎಂದರೆ ಸರಿ. ದಿ. 12-12-2014 ರಂದು ಸಿಂಡಿಕೇಟ್ ಬ್ಯಾಂಕ್ ಮುಂಡ್ಕೂರು ಶಾಖೆಯಿಂದ ಒಂದು ಎನ್.ಒ ಸಿ. ಯನ್ನು ನೀವು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಎರಡನೇ ಪ್ರತಿವಾದಿಯು ಕೂಲಿ

ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ದಾವಾ ಆಸ್ತಿಯಲ್ಲ(ರುವ ಮನೆಯಲ್ಲಿ ಎರಡನೇ ಕುಟುಂಬದವರು ವಾಸವಾಗಿರುತ್ತಾರೆ.

3. ದಿ. 18-01-2018 ರ ದಾನ ಪತ್ರವನ್ನು ನಿಮ್ಮ ಕುಟುಂಬದಲ್ಲಿ ನಿಮ್ಮನ್ನು ಹೊರತುಪಡಿಸಿ ಬೇರೆ ಯಾರು ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ದಾನ ಪತ್ರವನ್ನು ನಾನು ನೋಡಿರುವುದಿಲ್ಲ. ಈ ದಾವೆ ದಾಖಲಿಸುವ ಪೂರ್ವದಲ್ಲಿ ನೀವೇನಾದರೂ ಸದರಿ ದಾನ ಪತ್ರವನ್ನು ಪಡೆಯಲು ಪ್ರಯತ್ನ ಪಟ್ಟಿರುತ್ತಿರೋ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದಾವಾ ದಾಖಲಿಸುವ ಸಂದರ್ಭದಲ್ಲಿ ದಾವಾ ಆಸ್ತಿಯ ಪಹಣಿ ಪತ್ರಿಕೆಗಳು ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು, ಅದನ್ನು ಅವರು ಮಾಡಿಸಿಕೊಂಡಿರುತ್ತಾರೆ.

**ಮುಂದುವರೆದ ಪಾಟಿ ಸವಾಲು ಮಾಡಲು ವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಆಲಿಸಿ ನೀಡಲಾಗಿದೆ.**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ